ಅ) ಹಣ ಸಂದಾಯವಾಗಿದ್ದರೂ ಫಲಾನುಭವಿಗಳ ಉಪಯೋಗಕ್ಕೆ ಸಿಕ್ಕಿದ ಮನೆಗಳು ಎಷ್ಟು?

ಇ) ಸದರಿ ಮನೆಗಳ ಅವ್ಯವಹಾರದಲ್ಲಿ ಭಾಗಿಗಳಾದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ?

ಈ) ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಪರಿಶಿಷ್ಟ ಜಾತಿಯವರಿಗೆ ಡಾ। ಅಂಬೇಡ್ಕರ ಯೋಜನೆಯ 37 ಮನೆಗಳು ಮಂಜೂರುಮಾಡಲಾಗಿದೆ. ಇವುಗಳಲ್ಲಿ 13 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನುಳಿದ 24 ಮನೆಗಳನ್ನು ವಿವಿಧ ಹಂತದಲ್ಲಿದೆ.

ಆ) ಫಲಾನುಭವಿಗಳು ಸ್ವತ: ಮನೆ ಕಟ್ಟಲು ಮುಂದೆ ಬಾರದೇ ಇರುವುದರಿಂದ, ರೂ. 10.00 ಛಾಪಾ ಕಾಗದದಲ್ಲಿ ಮನೆಗಳ ನಿರ್ಮಾಣ ಕಾರ್ಯವನ್ನು ಸ್ಥಳೀಯ ನಿವಾಸಿಯೊಬ್ಬರಿಗೆ ವಹಿಸಿಕೊಡಲಾಗಿದೆ. ಪೂರ್ತಿ ಹಣ ಸಂದಾಯವಾಗಿದೆ. 24 ಮನೆಗಳು ವಿವಿಧ ಹಂತದಲ್ಲಿದ್ದು ಅಪೂರ್ಣವಾಗಿದೆ. 8 ಮನೆಗಳು ಪೂರ್ಣಗೊಂಡಿದೆ ಹಾಗೂ 5 ಮನೆಗಳನ್ನು ಫಲಾನುಭವಿಗಳು ಕಟ್ಟಿಕೊಂಡಿರುತ್ತಾರೆ.

ಇ) ಈ ಮನೆಗಳ ನಿರ್ಮಾಣದಲ್ಲಿ ನಡೆದ ಅವ್ಯವಹಾರದ ಬಗ್ಗೆ ಭಾಗಿಯಾದ ಅಧಿಕಾರಿ: ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗಿದ್ದು ವಿಚಾರಣಾ ಹಂತದಲ್ಲಿದೆ.

ಈ) ವಿಚಾರಣೆ ಮುಗಿದ ನಂತರ ತಪ್ಪಿತಸ್ಥರ ಮೇಲೆ ಕ್ರಮಕೈಗೊಳ್ಳಲಾಗುವುದು.

ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಿಗೆ ಎಂ.ಡಿ.ಎ. ಹಣ ಬಿಡುಗಡೆ

495 - ಶ್ರೀ ಕುಂಭಿ ಸುಂದರರಾವ್ (ಸುರತ್ಕಲ್) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಬಿಡುಗಡೆಯಾಗಬೇಕಾಗಿರುವ ಎಂ.ಡಿ.ಎ. ಹಣದ ಬಾಕಿ ಮೊಬಲಗು ಎಷ್ಟು ಎಷ್ಟು ಹಣವನ್ನು ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ?

ಆ) ಎಂ.ಡಿ.ಎ. ಹಣವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು?

ಇ) ಎಂ.ಡಿ.ಎ. ಹಣವನ್ನು ಬಿಡುಗಡೆ ಮಾಡುವಲ್ಲಿ ಉಂಟಾಗುವ ವಿಳಂಬದಿಂದಾಗಿ ಕೈಮಗ್ಗ ಕ್ಷೇತ್ರ ಹಾಗೂ ಸಹಕಾರ ಸಂಘಗಳು ಸಂಕಷ್ಟಕ್ಕೆ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಈ) ಎಂ.ಡಿ.ಎ. ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಿ ಅನುಕೂಲ ಮಾಡಿಕೊಡಲು ಇನ್ನು ಮುಂದಾದರೂ ಸರ್ಕಾರದವರು ಸೂಕ್ತ ಕ್ರಮವನ್ನು ಜರುಗಿಸುವರೇ?

ಶ್ರೀ ಪಿ.ಸಿ. ಸಿದ್ದನಗೌಡರ್(ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ರೂ. 1,16,32,174.00 ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಶೀಘ್ರವಾಗಿ ಕೇಂದ್ರ ಸರ್ಕಾರದ ಪಾಲು ಬಿಡುಗಡೆ ಯಾಗದೇಯಿರುವ ಕಾರಣ ಎಂ.ಡಿ.ಎ. ಹಣ ಬಿಡುಗಡೆಯಾಗುವಲ್ಲಿ ವಿಳಂಬವಾಗಿರುತ್ತದೆ.

ಇ) ಬಂದಿದೆ.

ಈ) ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಎಂ.ಆರ್.ಪಿ.ಎಲ್.ನಲ್ಲಿ ನಿರ್ವಸಿತ ಕುಟುಂಬದವರಿಗೆ ಉದ್ಯೋಗ

497 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಂ.ಆರ್.ಪಿ.ಎಲ್. ಸಂಸ್ಥೆಯವರಿಗೆ ಪ್ರತಿ ನಿರ್ವಸಿತ ಕುಟುಂಬಕ್ಕೊಂದು ಉದ್ಯೋಗ ನೀಡುವಂತ ಸರ್ಕಾರ ಆದೇಶ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕಾರ್ಯರೂಪಕ್ಕೆ ಬಂದಿದೆಯೇ?

ಇ) ನಿರ್ವಹಿಸಿತರು ತಮ್ಮ ಬೇಡಿಕೆಯ ಈಡೇರಿಕೆಗಾಗಿ, ಹೋರಾಟ ಸತ್ಯಾಗ್ರಹ ಹಮ್ಮಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ವಿಚಾರದಲ್ಲಿ ಸರ್ಕಾರ ಕೈಗೊಂಡ ಪರಿಹಾರದ ಕ್ರಮಗಳೇನು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ನಿಜ.

ಆ) ಇದರ ಬಗ್ಗೆ ಸರ್ಕಾರ ನಿಗಾವಹಿಸುತ್ತದೆ

ಇ) ಜನರ ಭಾವನೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ.